ನನಗೆ ಅನ್ನಿಸಿದ್ದು:

**ಸಾವಿರಾರು ವರ್ಷಗಳಿಂದ**
**ಹಾಗೇ ಇದ್ದಾನೆ ಗಣಪ**
**ಒಂದೂವರೆ ಹಲ್ಲು**
**ಕಾರಣ ಇಷ್ಟೆ, ದುಬಾರಿಯಾಗಿದೆ**
**ದಂತವೈದ್ಯರ ಬಿಲ್ಲು!**

ಮನುಷ್ಯರಿಗೆ ಕಿವಿಗಳು ಇಲ್ಲದಿದ್ದರೆ ಏನಾಗುತ್ತದೆ? ಈ ಪ್ರಶ್ನೆಗೆ ಸಾಂಪ್ರದಾಯಿಕವಾಗಿ ಯೋಚಿಸಿದಾಗ ಹೊಳೆಯುವ ಉತ್ತರ –ಸದ್ದು ಕೇಳಿಸುವುದಿಲ್ಲ. ಆದರೆ ಬೀchiಯವರ ತಿಂಮನ ಹತ್ತಿರ ಯಾರೋ ಇದೇ ಪ್ರಶ್ನೆ ಕೇಳಿದಾಗ ಆತ ಕಣ್ಣು ಸರಿಯಾಗಿ ಕಾಣಿಸುವುದಿಲ್ಲ ಅಂದಿದ್ದ. ಯಾಕೆ? ಅಂದಾಗ ತಿಂಮ ಕೊಟ್ಟ ಕಾರಣ – ಕಿವಿಗಳು ಇಲ್ಲದಿದ್ದರೆ ಕನ್ನಡಕ ಧರಿಸಲು ಆಗುವುದಿಲ್ಲ! ಆದ್ದರಿಂದ ಕಣ್ಣು ಸರಿಯಾಗಿ ಕಾಣಿಸುವುದಿಲ್ಲ. ಕೊರೊನಾ ಕಾಲದಲ್ಲಿ ನಾವೆಲ್ಲರೂ ಮಾಸ್ಕ್ ಧರಿಸಿ ತಿರುಗಾಡುತ್ತಿದ್ದಾಗ ನಾನು ಮಾಡಿದ ವಕ್ರಾಲೋಚನೆಯ ಫಲವಾಗಿ ನನಗೆ ಅನ್ನಿಸಿದ್ದೇನು ಗೊತ್ತಾ?

**ಸೃಷ್ಟಿಕರ್ತ ಬ್ರಹ್ಮನ**
**ಮುಂದಾಲೋಚನೆಗೆ**
**ಥ್ಯಾಂಕ್ಸ್ ಹೇಳಲೇಬೇಕು**
**ಮಾಸ್ಕ್ ಧರಿಸಲು**
**ಇಟ್ಟಿದ್ದಾನೆ ಮುಖದ**
**ಎರಡೂ ಕಡೆ ಹುಕ್ಕು!**

ಈ ದೃಷ್ಟಿಯಿಂದ ಯೋಚಿಸಿದರೆ ಮನುಷ್ಯರಿಗೆ ಕಿವಿಗಳು ಇಲ್ಲದಿದ್ದರೆ ಏನಾಗುತ್ತಿತ್ತು? ಎಂಬ ಪ್ರಶ್ನೆಗೆ ಕೊರೊನಾ ಬರುತ್ತಿತ್ತು ಎಂದು ಉತ್ತರಿಸಬಹುದು.

ನಗರದ ವೃತ್ತಗಳಲ್ಲಿ, ಪಾರ್ಕುಗಳಲ್ಲಿ ಮಹಾ ಪುರುಷರ ಪ್ರತಿಮೆಗಳನ್ನು ಏಕೆ ನಿಲ್ಲಿಸುತ್ತಾರೆ? ಈ ಪ್ರಶ್ನೆಯ ಬಗ್ಗೆ ಗಂಭೀರವಾಗಿ ಯೋಚಿಸಿದಾಗ ಅವರಿಗೆ ನಮ್ಮ ಕೃತಜ್ಞತೆ, ಗೌರವವನ್ನು ಸೂಚಿಸಲು, ಅವರ ನೆನಪನ್ನು ಚಿರಸ್ಥಾಯಿಯಾಗಿಸಲು ಎಂಬ ಉತ್ತರಗಳನ್ನು ನಿರೀಕ್ಷಿಸಬಹುದು. ರೂಢಿಗತವಾದ ಈ ಕಾರಣಗಳನ್ನು ಬಿಟ್ಟು ತಮಾಷೆಗಾಗಿ ಬೇರೆ ಕಾರಣಗಳನ್ನು ಹುಡುಕತೊಡಗಿದಾಗ ನನಗೆ ಹೊಳೆದ ಕೆಲವು ಸಂಗತಿಗಳು ಇಗೊಳ್ಳಿ ಹೀಗಿವೆ:

**ಗಾಂಧೀಜಿ ಪ್ರತಿಮೆಯನ್ನು**
**ದೇಶದ ಎಲ್ಲಾ ಕಡೆಗಳಲ್ಲಿ**
**ನಿಲ್ಲಿಸಲಾಗಿದೆ.**
**ಏಕೆಂದರೆ ಅವರ ತತ್ವ**
**ಆದರ್ಶಗಳ ಪಾಲನೆಯನ್ನು**
**ನಿಲ್ಲಿಸಲಾಗಿದೆ.**

ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಯಲ್ಲಿ ಯಾವಾಗಲೂ ಒಂದು ಕೈ ಎತ್ತಿಕೊಂಡೇ ಇರುವುದೇಕೆ? ಕಾರಣ ಬಹಳ ಸರಳ- ಸಂವಿಧಾನ ರಚಿಸುವುದರಲ್ಲಿ ಅವರದ್ದು ಎತ್ತಿದ ಕೈ! ಹಲವು ವರ್ಷಗಳ ಹಿಂದೆ ಹುಬ್ಬಳ್ಳಿಯ ಟ್ರಾಫಿಕ್ ಐಲ್ಯಾಂಡ್ ಮತ್ತು ಬೆಳಗಾವಿಯ ಹೃದಯ ಭಾಗದಲ್ಲಿ ನಿಲ್ಲಿಸಲಾಗಿದ್ದ ಕಲ್ಲಿನ ಕುದುರೆಯ ಮೇಲೆ ಕುಳಿತ ರಾಣಿ ಚೆನ್ನಮ್ಮನ ಪ್ರತಿಮೆಯನ್ನು ಕಂಡಾಗ ನನಗೆ ಬಂದ ಅಡ್ಡ ಯೋಚನೆ-ಎಡೆಬಿಡದೆ ಬರುವ ವಾಹನಗಳ ಗದ್ದಲಕ್ಕೆ ಹೆದರಿ, ಚೆನ್ನಮ್ಮನ ಕುದುರೆ ನಿಂತಲ್ಲೆ ನಿಂತು ಕಲ್ಲಾಗಿರಬಹುದೆ?

ಕಪ್ಪು ಹಣವನ್ನು ಬಿಳಿ ಮಾಡುವುದಕ್ಕೆ ಇಂಗ್ಲಿಷ್ ಭಾಷೆಯಲ್ಲಿ 'ಮನಿ ಲಾಂಡರಿಂಗ್' ಅನ್ನುತ್ತಾರೆ. ಇದು ಆ ಪದದ ಸಾಂಪ್ರದಾಯಿಕ ಅರ್ಥ. ಅಸಾಂಪ್ರದಾಯಿಕವಾಗಿ ಯೋಚಿಸಿದರೆ, ವಾಷಿಂಗ್ ಮೆಷಿನ್‌ನಿಂದ ತೆಗೆದ ಅಂಗಿಯ ಕಿಸೆಯಲ್ಲಿ ನಾವು ಮರೆತ ನೋಟು ಸಿಗುತ್ತದಲ್ಲ ಅದೂ ಮನಿ ಲಾಂಡರಿಂಗ್! 'ದಸ್ಕತ್ತು' ಎಂಬ ಶಬ್ದದ ಮಾಮೂಲು ಅರ್ಥ ರುಜು ಅಥವಾ ಸಿಗ್ನೇಚರ್. ಸರ್ಕಾರಿ ಕಚೇರಿಯಲ್ಲಿ ದಾಖಲೆ ಪತ್ರಗಳಿಗೆ ಸಾಹೇಬರ ಸಹಿ ಆಗಬೇಕಾದರೆ ಮಾಮೂಲು ಕೊಡಬೇಕು. ಆದರೆ ಇನ್ನೊಂದು ರೀತಿಯಲ್ಲಿ ಯೋಚಿಸಿದರೆ ದಸ್ಕತ್ತು ಎಂದರೆ ರಾವಣ ಅಂತಲೂ ಅನ್ನಬಹುದು. ಹೇಗೆ ಅಂತೀರಾ? ದಸ್ ಅಂದರೆ ಹಿಂದಿಯಲ್ಲಿ ಹತ್ತು. ಕತ್ತು ಅಂದರೆ ಕೊರಳು. ದಶಕಂಠ ರಾವಣ ಹತ್ತು ಕತ್ತು ಹೊಂದಿದ್ದ. ಆದ್ದರಿಂದ ದಸ್ಕತ್ತು ಅಂದರೆ ರಾವಣ! ಪೂರ್ವಗ್ರಹ ಪೀಡಿತರಾಗದೆ, ಮುಕ್ತ ಮನಸ್ಸಿನಿಂದ ಚಿಂತಿಸಿದರೆ ಮಾತ್ರ ಅಡ್ಡ ಯೋಚನೆಗಳು ಬರಲು ಸಾಧ್ಯ.

ಕೇವಲ ಹಾಸ್ಯಕ್ಕಾಗಿ ಬಳಕೆಯಾಗುತ್ತಿದ್ದ ನನ್ನ ಅಡ್ಡ ಯೋಚನೆಯಿಂದ ಇನ್ನೊಬ್ಬರಿಗೆ ಪ್ರಯೋಜನವಾದ ಒಂದು ಘಟನೆ ನೆನಪಾಗುತ್ತಿದೆ. ನಾನು ರೈಲಿನಲ್ಲಿ ಪ್ರಯಾಣಿಸುತ್ತಿದ್ದಾಗ ನನ್ನ ಎದುರು ಕುಳಿತಿದ್ದ ಯುವಕ ಸೀಟಿನ ಕೆಳಗೆ ಇಟ್ಟಿದ್ದ ಬ್ಯಾಗನ್ನು ತೆಗೆಯಲಾಗದೆ ಒದ್ದಾಡುತ್ತಿದ್ದ. ರಾತ್ರಿ ಅವನೇ ಮಂತ್ರಿಗಳ ಉದರದಂತೆ ಊದಿಕೊಂಡಿದ್ದ ಅದನ್ನು ಬಲವಾಗಿ ಒತ್ತಿ ಒತ್ತಿ ಸೀಟಿನಡಿ